**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 45/2014**

**ಪಿ.ಡಬ್ಲ್ಯೂ - 8**

ಸಾಕ್ಷಿಗೆ ದಿನಾಂಕಃ **27.02.2024** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಎಸ್.ವಿ.ಎಸ್. ವಕೀಲರಿಂದಃ**

ನಾನು ಬಿ.ಎ. ಪದವಿ ವ್ಯಾಸಂಗ ಮಾಡಿದ್ದೇನೆ. ರಾಜಾಜೀನಗರ ಆರ್.ಟಿ.ಓ.ದಲ್ಲಿ ಕೆಲಸ ಮಾಡುವ ನನ್ನ ಅಣ್ಣನ ಹೆಸರು ವಿಶ್ವನಾಥ. ನನ್ನ ಅಣ್ಣ ಬ್ರೋಕರ್ ಕೆಲಸ ಮಾಡುತ್ತಾರೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಈ ಹಿಂದೆ ನನಗೆ ಎಂದೂ ದೂರವಾಣಿ ಕರೆ ಮಾಡಿಲ್ಲ. ನನ್ನ ಫೋನ್ ನಂಬರ್‌ನಿಂದಲೂ ಅವರಿಗೆ ಕರೆ ಮಾಡಿಲ್ಲ. 2009 ರಲ್ಲಿ ಬೆಂಗಳೂರಿನ ಕುರುಬರಹಳ್ಳಿಯಲ್ಲಿ ವಾಸವಿದ್ದೆ. ಆರೋಪಿ ಮನೆಗೂ ನಮ್ಮ ಮನೆಗೆ ಎಷ್ಟು ಅಂತರ ಎಂದರೆ ಸಾಕ್ಷಿ ಆರೋಪಿ ಮನೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆರೋಪಿ ನನಗೆ ಬಹಳ ವರ್ಷಗಳಿಂದ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆ.ಎಸ್.ಆರ್.ಟಿ.ಸಿ.ಯಲ್ಲಿ 2006 ರಿಂದ ಕಂಟಕ್ಟರ್‌ಗಿ ಕೆಲಸ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂದಿಸಿದಂತೆ ಬೆಳಕವಾಡಿ ಪೊಲೀಸ್ ಠಾಣೆಗೆ ಹೋಗಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ಎಂದೂ ಭೇಟಿ ಮಾಡಿಲ್ಲ. ನಮ್ಮ ಇಲಾಖೆಯಲ್ಲಿ ನೀಡುವ ಉಚಿತ ಪಾಸ್‌ನ್ನು ಬಳಕೆ ಮಾಡುವ ಬಗ್ಗೆ ನಿಯಮಾವಳಿಗಳಿವೆ ಎಂದರೆ ಸರಿ. ನಿಯಮಾವಳಿಗಳ ದಾಖಲೆಗಳನ್ನು ಪೊಲೀಸರು ನನ್ನಿಂದ ಪಡೆದಿಲ್ಲ. ನಿಯಮಾವಳಿಗಳ ಪ್ರಕಾರ ಉಚಿತ ಪಾಸ್‌ನ್ನು ಒಂದು ವರ್ಷದ ನಂತರ ಪಾಸ್‌ನ್ನು ಸರ್ಕಾರಕ್ಕೆ ಹಿಂದಿರುಗಿಸಬೇಕು ಎಂದರೆ ಸರಿ. ನಿಯಮಾವಳಿಗಳ ಪ್ರಕಾರ ನಾನು ಪ್ರತಿದಿನ ಅಸಲು ಪಾಸ್‌ನ್ನು ತೆಗೆದುಕೊಂಡು ಹೋಗಬೇಕು ಎಂದರೆ ಸರಿ. ನಾನು ಇದುವರೆಗೆ ಉಚಿತ ಪಾಸ್ ಕಳ್ಳತನವಾಗಿರುವ ಬಗ್ಗೆ ಅಥವಾ ದುರುಪಯೋಗವಾಗಿರುವ ಬಗ್ಗೆ ದೂರನ್ನು ದಾಖಲಿಸಿಲ್ಲ. ನಾನು ಸರ್ಕಾರದ ನಿಯಮಾವಳಿಗಳಂತೆ ನಾನು ಪಾಸ್‌ನ್ನು ಬಳಕೆ

ಮಾಡುತ್ತಿದ್ದೇನೆ ಎಂದರೆ ಸರಿ. ನಾನು ಇದುವರೆಗೂ ಸರ್ಕಾರದ ನಿಯಮಾವಳಿಗಳಿಗೆ ವಿರುದ್ದವಾಗಿ ಪಾಸ್‌ನ್ನು ದುರ್ಬಳಕೆ ಮಾಡಿಕೊಂಡಿಲ್ಲ.

3. ನನ್ನ ಉಚಿತ ಪಾಸ್‌ನ ಜೆರಾಕ್ಸ್ ಪ್ರತಿಯನ್ನು ಬಳಸಿ ಓಡಾಡುತ್ತಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಬೆಂಗಳೂರು - ಮೈಸೂರು ರೂಟ್‌ನ ಬಸ್‌ನಲ್ಲಿ ಆರೋಪಿ ಪ್ರಯಾಣಿಸುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದು ಯಾವ ದಿನ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ದಿನಾಂಕ ಮರೆತಿದ್ದೇನೆ. ಯಾವ ಸಂಖ್ಯೆಯ ಬಸ್‌ನಲ್ಲಿ ನಾನು ಆ ದಿನ ನಿರ್ವಹಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದು ನೆನಪಿಲ್ಲ. ಆರೋಪಿ ಖಾಕಿ ಸಮವಸ್ತ್ರವನ್ನು ಧರಿಸಿ, ಪ್ರಯಾಣಿಕರಂತೆ ಪ್ರಯಾಣಿಸುತ್ತಿದ್ದುದ್ದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿಯಲ್ಲ. ಆ ದಿನ ಆರೋಪಿ ಧರಿಸಿದ್ದಂತರಹ ಬ್ಯಾಡ್ಜ್ ಸಂಖ್ಯೆ ನನಗೆ ನೆನಪಿಲ್ಲ. ಆ ದಿನ ಆರೋಪಿಯನ್ನು ಟಿಕೆಟ್ ಪಡೆಯುವಂಗತೆ  ಕೇಳಿದ್ದು, ಅವರರು ಹೊಸದಾಗಿ ನಿರ್ವಹಕರಾಹಗಿ ಕೆಲಸಕ್ಕೆ ಸೇರಿರುವುದಾಗಿ ನನಗೆ ಹೇಳಿರುತ್ತಾರೆಂಧು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಉಚಿತ ಬಸ್ ಪಾಸ್ ಹೇಗಿರುತ್ತದೆ ಎಂದು ನೋಡಿ ಕೊಡುವುದಾಗಿ ಹೇಳಿ ಆರೋಪಿ ನನ್ನಿಂದ ಪಡೆದರು ಎಂಧು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಆ ದಿನ ಎಲ್ಲಿ ಬಸ್‌ನ್ನು ಹತ್ತಿಕೊಂಡರು ಎಂದು ನನಗೆ ನೆನಪಿಲ್ಲ. ಆರೋಪಿ ಎಲ್ಲಿ ಬಸ್‌ನಿಂದ  ಇಳಿದ ಎಂಧು ನನಗೆ ಗೊತ್ತಿಲ್ಲ. ನಾನು ಚನ್ನಪಟ್ಟಣದಿಂದ ಮದ್ದೂರು ಬಸ್ ನಿಲ್ದಾಣಕ್ಕೆ ಬಂದಾಗ ಆರೋಪಿ ನಾಪತ್ತೆಯಾಗಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮದ್ದೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಇದೆ ಎಂಧರೆ ಸರಿ. ಅಲ್ಲಿ ಒಬ್ಬರು ಮುಖ್ಯ ಅಧಿಕಾರಿ ಇರುತ್ತಾರೆ ಎಂದರೆ ಸರಿ. ಆ ದಿನ ನಾನು ಅಲ್ಲಿ ಎಂಟ್ರಿ ಮಾಡಿಸಿ, ನಂತರ ಮುಂದೆ ಹೋಗಬೇಕು ಎಂದರೆ ಸರಿ. ಆ ದಿನ ನಾನು ಆ ಆಧಿಕಾರಿಗೆ ಈ ರೀತಿ ಒಬ್ಬ ವ್ಯಕ್ತಿ ನನ್ನ ಪಾಸ್‌ನ್ನು ಪಡೆದುಕೊಂಡ ಬಗ್ಗೆ ಲಿಖಿತವಾಗಿ ದೂರನ್ನು ನೀಡಿಲ್ಲ. ಮೌಖಿಕವಾಗಿ ಹೇಳಿದ್ದೇನೆ. ಮೌಖಿಕವಾಗಿ ಹೇಳಿದ್ದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಲವು ದಿನಗಳ  ನಂತರ ಆರೋಪಿ ಪಾಸ್‌ನ್ನು ದುರುಪಯೋಗ

ಪಡೆಸಿಕೊಳ್ಳುತ್ತಿರುವ ಬಗ್ಗೆ ನನಗೆ ತಿಳಿಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಅಣ್ಣ ಆರೋಪಿಯೊಂದಿಗೆ ಹಣಕಾಸಿನ ವ್ಯವಾಹರ ನಡೆಸಿದ್ದೇವೆ ಎಂದರೆ ಸರಿಯಲ್ಲ. ಆತ ನನ್ನ ಅಣ್ಣನಿಗೆ ಸ್ನೇಹಿತ ಇರಬಹುದು. ಹಣಕಾಸಿನ ವಿಚಾರಕ್ಕೆ ಆರೋಪಿ ಮತ್ತು ನಮ್ಮ ನಡುವೆ ಗಲಾಟೆಯಾಗಿದ್ದು, ಆ ಕಾರಣ ನಾನು ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ಮೇಲಾಧಿಕಾರಿಗಳು ಸೇರಿ ನಮ್ಮ ಪ್ರಭಾವ ಬಳಸಿ, ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ನಾವುಗಳೆಲ್ಲರೂ ಸೇರಿ ನಿಪಿ 3 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಎಪಿಪಿ ರವರಿಂದ:**

ಈ ದಿನ ನ್ಯಾಯಾಲಯದ ಮುಂದಿರುವ ಈ ಪ್ರಕರಣದ ಆರೋಪಿಯೇ ಆ ದಿನ ನನ್ನಿಂದ ಪಾಸ್ ಪಡೆದ ವ್ಯಕ್ತಿ ಎಂದರೆ ಸಾಕ್ಷಿ ನನ್ನಿಂದ ಅವರನ್ನು ಗುರುತಿಸಲಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ಆರೋಪಿಯೇ ಆ ದಿನ ನನ್ನಿಂದ ಪಾಸ್ ಪಡೆದ ವ್ಯಕ್ತಿಯಗಿದ್ದರೂ ಸಹ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.